ಅಸಲು ದಾವೆ ನಂಃ 39/2024 ಪಿ . ಡಬ್ಲ್ಯೂಃ 1– ಗುರಪ್ಪ ತಂದೆ ಹನಮಪ್ಪ ಪೂಜಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 13/02/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಮ್.ಎ. ಎಮ್. ರವರಿಂದಃ**

ದಾವಾದ ಜಮೀನುಗಳನ್ನು ಹೊರತು ಪಡಿಸಿ ನನಗೆ ಬೇರೆ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ಅವುಗಳ ಸರ್ವೆ ನಂ.400/1/2 ಮತ್ತು ನನ್ನ ಅಣ್ಣನ ಜಮೀನಿನ ಸರ್ವೆ ನಂ.400/1 ಆಗಿರುತ್ತದೆ. ಸದರಿ ಜಮೀನುಗಳು ಒಟ್ಟು 9 ಎಕರೆ 20 ಗುಂಟೆ ಇರುತ್ತದೆ. ಅವುಗಳಲ್ಲಿ 4 ಎಕರೆ ರಾಮಚಂದ್ರಪ್ಪ ಹನಮಪ್ಪ ಪೂಜಾರ ಮತ್ತು ಇನ್ನುಳಿದ ಜಮೀನು ಸಿದ್ದಪ್ಪ ಹನಮಪ್ಪ ಪೂಜಾರ ಮತ್ತು ನನ್ನ ಹೆಸರಿನಲ್ಲಿ ಇರುತ್ತವೆ. ಸರ್ವೆ ನಂ.400 ಮೂಲತಃ ನನ್ನ ಅಜ್ಜಿಯ ಹೆಸರಿನಲ್ಲಿರುತ್ತದೆ. ಸದರಿ ಜಮೀನು ಇನಾಮು ಭೂಮಿ ಆಗಿರುತ್ತದೆ. ಅಜ್ಜಿ ಎಂದರೆ ನನ್ನ ತಂದೆಯ ತಾಯಿ ಆಗಿರುತ್ತಾರೆ. ನಮ್ಮ ಅಜ್ಜಿಗೆ ಮೂರು ಜನ ಗಂಡು ಮಕ್ಕಳು, ಇಬ್ಬರೂ ಹೆಣ್ಣು ಮಕ್ಕಳು ಇರುತ್ತಾರೆ. ಸರ್ವೆ ನಂ.400 ರಲ್ಲಿ ನನ್ನ ಅಜ್ಜಿಯವರು ನಿಧನರಾದ ನಂತರ ಹೆಸರು ಬದಲಾವಣೆ ಆಗಿರುತ್ತದೆ. ನಮ್ಮ ಅಜ್ಜಿಯವರು ನಿಧನರಾದ ನಂತರ ಸದರಿ ಜಮೀನಿನ ಒಟ್ಟು ವಿಸ್ತೀರ್ಣ 9 ಎಕರೆ 20 ಗುಂಟೆ ಆಸ್ತಿ ನನ್ನ ತಂದೆಯವರ ಹೆಸರಿಗೆ ಬಂದಿರುತ್ತದೆ. ನನ್ನ ತಂದೆಯವರಿಗೆ ಮೂರು ಜನ ಮಕ್ಕಳಾಗಿರುವುದರಿಂದ ಸದರಿ ಜಮೀನಿನಲ್ಲಿ ಭಾಗವಾಗಿರುತ್ತದೆ.

2. ದಾವಾ ಆಸ್ತಿಯು ಸಹಿತ ನನ್ನ ತಂದೆಯವರಿಂದ ಬಂದಿರುತ್ತದೆ. ದಾವಾ ಆಸ್ತಿ ಮತ್ತು ಸರ್ವೆ ನಂ.400 ರಲ್ಲಿ ಪಾಲುವಿಭಾಗವಾಗಿರುವ ಬಗ್ಗೆ ನೊಂದಣಿ ಕಛೇರಿಯಲ್ಲಿ ನಮೂದು ಆಗಿರುತ್ತದೆ. ಎರಡು ಜಮೀನುಗಳು ಪ್ರತ್ಯೇಕವಾಗಿ ನೊಂದಣಿ ಕಛೇರಿಯಲ್ಲಿ ನೊಂದಣಿ ಆಗಿರುತ್ತದೆ. ಯಾವ ದಿನಾಂಕದಂದು ನೊಂದಣಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ದಿನಾಂಕ ನೆನಪಿಲ್ಲ ಆದರೆ 1979–80 ರಲ್ಲಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಎರಡು ದಾಖಲಾತಿಗಳು ನೊಂದಣಿ ಆಗಿರುವ ಬಗ್ಗೆ ನಾನು ನ್ಯಾಯಾಲಯದಲ್ಲಿ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

3. ನನಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ನಿರ್ದಿಷ್ಟವಾಗಿ ಎಷ್ಟು ಆಸ್ತಿ ಬಂದಿರುತ್ತದೆ ಎಂದು ನನ್ನ ವಾದಪತ್ರದಲ್ಲಿ ನಮೂದಿಸಿರುವುದಿಲ್ಲ ಮತ್ತು ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನೌಕರಿ ಮಾಡುತ್ತಿದ್ದುದ್ದರಿಂದ ಸುಮಾರು 38 ವರ್ಷಗಳ ಕಾಲ ಬೇರೆ ಊರಿನಲ್ಲಿ ವಾಸವಾಗಿದ್ದೆ. ನಾನು ಬೇರೆ ಊರಿನಲ್ಲಿ ವಾಸವಾಗಿದ್ದಾಗ ನನ್ನ ಜಮೀನನ್ನು ಬೇರೆಯವರು ಸಾಗುವಳಿ ಮಾಡುತ್ತಿದ್ದರು ಎನ್ನುವುದನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯವರು ನನ್ನ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸುವುದಕ್ಕೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಜಮೀನು ಎಷ್ಟು ಅಳತೆ ಇರುತ್ತದೆ ಎಂದು ತೋರಿಸಲು ಸಹ ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಎಷ್ಟು ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಮತ್ತು ಎಷ್ಟು ಆಸ್ತಿ ಅತೀಕ್ರಮಣವಾಗಿದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ .ಸಾಕ್ಷಿಯು ಮುಂದುವರೆದು ಅಳತೆ ಮಾಡಲು ಬಿಡದೇ ಇದ್ದಾಗ ಹೇಗೆ ದಾಖಲಾತಿಗಳನ್ನು ಹಾಜರುಪಡಿಸುವುದು ಎಂದು ಹೇಳಿರುತ್ತಾರೆ. ಸರಕಾರದವರು ಅಳತೆ ಮಾಡುವಾಗ ಜಮೀನಿನ ಸುತ್ತ ಮುತ್ತಲೂ ಇರುವ ಇಲ್ಲರಿಗೂ ನೋಟೀಸ್

ಅನ್ನು ನೀಡಿರುತ್ತಾರೆ ಎಂದರೆ ಸರಿ . ದಿಃ 07.11.2018, ದಿಃ 26.06.2020 , ದಿಃ 08.05.2021 ಮತ್ತು ದಿಃ 20.09.2021ರಂದು ಭೂ ಮಾಪಕರು ಅಳತೆ ಮಾಡಲು ಬಂದಾಗ ನನಗೆ ನೀಡಿದ ನೋಟೀಸಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅಳತೆ ಮಾಡಲು ನಾಲ್ಕು ಜನ ಭೂ ಮಾಪಕರು ಬಂದಿರುತ್ತಾರೆ. ನಾಲ್ಕು ಜನರು ಭೂ ಮಾಪಕರು ಬಂದಾಗ ಅಡ್ಡಿಪಡಿಸಿರುತ್ತಾರೆ ಎಂದು ಹಾಕಲಾದ ವರದಿಯನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣ ಅತಿಕ್ರಮಣವಾಗಿರುತ್ತದೆ ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ಅತೀಕ್ರಮಣವಾಗಿರುತ್ತದೆ ಎಂದು ನನಗೆ 2018-20ರಲ್ಲಿ ತಿಳಿದಿರುತ್ತದೆ. 38 ವರ್ಷಗಳಿಂದ ಪ್ರತಿವಾದಿಯವರು ಸಾಗವಳಿ ಮಾಡುತ್ತಿರುವುದಕ್ಕೆ ಸಂಬಂಧಿಸಿದಂತೆ ನಾನು ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿ . 2018-20ರ ನಂತರ ಅತೀಕ್ರಮಣವಾಗಿರುವುದು ನನಗೆ ತಿಳಿದ ನಂತರವೂ ಸಹ ದಾವೆಯನ್ನು ಮಾಡಿರುವುದಿಲ್ಲ ಎಂದರೆ ಸರಿ. ನಾನು ದೂರನ್ನು ನೀಡಿದಾಗ ಎಫ್ ಐ ಆರ್. ಆಗಿರುವುದಿಲ್ಲ . ನಾನು ಲಿಖಿತ ದೂರನ್ನುನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಲಿಖಿತ ದೂರನ್ನು ನೀಡಿದಾಗ ಪೊಲೀಸರು ತೆಗೆದುಕೊಂಡಿರುವುದಿಲ್ಲ. ಇಬ್ಬರಿಗೂ ಬುದ್ದಿವಾದ ಹೇಳಿ ಕಳುಹಿಸುತ್ತಿದ್ದರು ಎಂದು ಹೇಳಿರುತ್ತಾರೆ. ಪೊಲೀಸರು ಲಿಖಿತ ದೂರನ್ನು ಪಡೆದುಕೊಂಡಿರುವುದಿಲ್ಲ ಎಂದು ನಾನು ಮುಂದಿನ ಕ್ರಮವನ್ನು ಮಾಡಿರುವುದಿಲ್ಲ ಎಂದರೆ ಸರಿ . ನಾನು ನೀಡಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತೇನೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

4. ಪ್ರತಿವಾದಿಯವರು ಸ್ವಾಧೀನದಲ್ಲಿರುವ ಆಸ್ತಿ ನಂ.401/3. ನಾನು ನೌಕರಿಗೆ ಹೋದಾಗಿನಿಂದ ಇಲ್ಲಿಯಮರೆಗೂ ಪ್ರತಿವಾದಿಯವರು ಅಷ್ಟೇ ಜಮೀನಿನ ಸ್ವಾಧೀನದಲ್ಲಿರುತ್ತಾರೆ. ಪ್ರತಿವಾದಿಯವರಿಗೆ ವ್ಯವಸಾಯ ಮಾಡುವುದನ್ನು ಹೊರತುಪಡಿಸಿ ಬೇರೆ ಉದ್ಯೋಗ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ.401/3ರಲ್ಲಿ ಬೋರನ್ನು ಹಾಕಿಸಿರುತ್ತಾರೆ ಎಂದರೆ ಸರಿ. ದಾವಾಆಸ್ತಿಯಲ್ಲಿ ಪ್ರತಿವಾದಿಗಳು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ತಮ್ಮ ಜಮೀನಿನಲ್ಲಿ ಬೋರ್ ಹಾಕಿಸಿಕೊಂಡು ಭೂಮಿಯನ್ನು ಅಭಿವೃದ್ಧಿಪಡಿಸಿ ವ್ಯವಸಾಯ ಮಾಡುತ್ತಿದ್ದರೂ ಸಹ ನಾನು ತೊಂದರೆ ಕೊಡುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನಗೆ ಯಾವ ರೂಪದಲ್ಲಿ ಬಂದಿರುತ್ತದೆ , ಎಷ್ಟು ಆಸ್ತಿಗೆ ನಾನು ಮಾಲೀಕನಾಗಿರುತ್ತೇನೆ ಎನ್ನುವ ಸಂಗತಿಯನ್ನು ಉದ್ದೇಶಪೂರ್ವಕವಾಗಿ ವಾದಪತ್ರದಲ್ಲಿ ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.400/2 ಇಂದಿಗೂ ಸಹ ನನ್ನ ಮತ್ತು ಪ್ರತಿವಾದಿಯವರ ಜಂಟಿ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸರ್ವೆ ನಂ.400/2 5 ಎಕರೆ 20 ಗುಂಟೆ ಜಮೀನು ಇರುತತದೆ. ಸದರಿ ಜಮೀನಿನಲ್ಲಿ ಇಂದಿಗೂ ಸಹ ಸಮನಾಗಿ ಹೆಂಚಿಕೆಯಾಗಿರುವುದಿಲ್ಲ ಎಂದರೆ ಸರಿ . ಸರ್ವೆ ನಂ.401/3 ಮತ್ತು 401/4 ಜಮೀನುಗಳಲ್ಲಿ ಹಂಚಿಕೆಯಾಗಿ ಅವರವರು ಸ್ವಾಧೀನದಲ್ಲಿದ್ದುಕೊಂಡು ಅಭಿವೃದ್ದಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ಸರಕಾರಿ ನೌಕರನಾಗಿರುವುದರಿಂದ ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ನ್ಯಾಯಬದ್ಧವಾಗಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.